**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 88/2020**

**ಚಾ.ಸಾಃ2, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ಪರಮೇಶ್ವರ ಪಟಾಗಾರ |
| ತಂದೆಯ ಹೆಸರು | ನಾರಾಯಣ ಪಟಗಾರ |
| ವಯಸ್ಸು | 63 ವರ್ಷಗಳು |
| ಉದ್ಯೋಗ | ನಿವೃತ್ತ ಶಿಕ್ಷಕ |
| ವಾಸ್ತವ್ಯ | ಹಾಲಿ ವಸತಿ ಬರ್ಗಿ, ತಾಃ ಕುಮಟಾ<br>ಹಿಂದಿನ ವಿಳಾಸಃ ಚಂದಾವರ |

**ಸಾಕ್ಷಿಯನ್ನು ದಿನಾಂಕಃ 28-07-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ಘಟನಾ ಸ್ಥಳದ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅವುಗಳ ಮೇಲಿನ ಸಹಿಗಳನ್ನು ತನ್ನದು ಎಂದು ತಿಳಿಸಿದ್ದರಿಂದ, ಪಂಚನಾಮೆಯನ್ನು ನಿಪಿ-1, ಕಚ್ಚಾ ನಕಾಶೆಯನ್ನು ನಿಪಿ-2 ಮತ್ತು ಅವುಗಳ ಮೇಲಿನ ಸಾಕ್ಷಿ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

ಸದ್ರಿ ಸಹಿಗಳನ್ನು ದಿನಾಂಕ 07-05-2019 ರಂದು ಚಂದಾವರದ ಗಣಪತಿ ಬೀದಿಯಲ್ಲಿರುವ ಚಾಸಾ-1 ಶ್ರೀಮತಿ ಮಂಗಲಾ ವಿಜಯ ನಾಯ್ಕರವರ ವಾಸದಮನೆಯಲ್ಲಿ ಅವರ ಮನೆಯಲ್ಲಿ ಕಳ್ಳತನ ಆಗಿದ್ದಕ್ಕೆ ಸಂಬಂಧಿಸಿದಂತೆ ಮಾಡಿರುತ್ತೇನೆ. ಸ್ಥಳಕ್ಕೆ ಪೋಲಿಸರು ಬಂದಿದ್ದು ಮನೆಯನ್ನು ಪರಿಶೀಲನೆ ಮಾಡಿ ಪಂಚನಾಮೆ ಮಾಡಿ, ಕಚ್ಚಾ ನಕಾಶೆ ತಯಾರಿಸಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ-3 ಗೋವಿಂದ ನಾಯ್ಕ ಮತ್ತು ಪೋಲಿಸರು ಇದ್ದರು. ಕಳ್ಳತನ ಆಗಿರುವ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಪೋಲಿಸರು ಸ್ಥಳದಲ್ಲಿ ಛಾಯಾಚಿತ್ರ ತೆಗೆಸಿರುತ್ತಾರೆ. ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಎರಡು ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಾನು ಆ ಸಂದರ್ಭದಲ್ಲಿ ಹೊನ್ನಾವರ ತಾಲೂಕಿನ ಹೊದ್ಕೆಶಿರೂರಿನಲ್ಲಿರುವ ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ಚಾಸಾ-1 ರವರು ಚಾಸಾ-3 ರವರ ಹೆಂಡತಿಯ ತಂಗಿ ಎಂದರೆ ಸರಿ. ನಾನು ಕೆಲಸ ಮಾಡುತ್ತಿದ್ದ ಶಾಲೆಗೆ ಚಾಸಾ-3 ರವರು ಹಲವಾರು ಕೊಡುಗೆಗಳನ್ನು ನೀಡಿದ್ದಾರೆ ಎಂದರೆ ಸರಿ. ಚಾಸಾ-

3 ರವರ ಜೊತೆ ನನ್ನ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ನಾನು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಚಾಸಾ–1 ರವರ ಮನೆಯಲ್ಲಿ ದೀರ್ಘಕಾಲ ಬಾಡಿಗೆಗೆ ಇದ್ದೆ ಮತ್ತು ಅವರ ಮನೆಯ ಸದಸ್ಯನಂತೆ ಇದ್ದೆ ಎಂದರೆ ಸರಿ.

ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಆದರೆ ಪೋಲಿಸರು ಪಂಚನಾಮೆಯನ್ನು ಬರೆದುಕೊಂಡ ನಂತರ ನಮಗೆ ಓದಿ ಹೇಳಿರುತ್ತಾರೆ. ಪಂಚನಾಮೆಯನ್ನು ಓದಿದ ವ್ಯಕ್ತಿಯ ಹೆಸರು ಮತ್ತು ಹುದ್ದೆ ನನಗೆ ಗೊತ್ತಿಲ್ಲ. ನಾನು ಪೋಲೀಸ್ ಠಾಣೆಯಲ್ಲಿ ಯಾವುದೇ ಸಹಿಗಳನ್ನು ಮಾಡಿರುವುದಿಲ್ಲ. ಸದರಿ ಸಹಿಗಳನ್ನು ಚಾಸಾ–1 ರವರ ಮನೆಯಲ್ಲಿ ಮಾಡಿರುತ್ತೇನೆ.

ನಾನು ಗುನ್ನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಪೋಲಿಸರು ಸ್ಥಳದಲ್ಲಿ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಮನೆಯಲ್ಲಿ ನಾನು ಬಾಡಿಗೆಗೆ ಇದ್ದದ್ದರಿಂದ ಸದರಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–3 ಮತ್ತು 4 ಗುನ್ನೆ ಜಾಗೆಯಲ್ಲಿ ತೆಗೆಸಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**